## ಮುತ್ತಿನ ಕೆರೆ

ಉತ್ತರ ಕನ್ನಡ ಜಿಲ್ಲೆಯ ಶಿರಸಿಯಿಂದ 24 ಕಿ.ಮೀ ದೂರದಲ್ಲಿರುವ ಸೋಂದಾದಲ್ಲಿದೆ ಈ ಮುತ್ತಿನ ಕೆರೆ. ಇದರ ವೈಶಿಷ್ಟ್ಯವೆಂದರೆ ಪ್ರತಿನಿತ್ಯ ಈ ಕೆರೆಯ ನೀರು ನೀಲಿ, ಹಸಿರು ಮತ್ತು ಕೆಂಪು ಈ ಮೂರು ಬಣ್ಣಗಳಗೆ ಬದಲಾಗುತ್ತದೆ. ಈ ಕೆರೆಯನ್ನು ಸೋದೆ ಅರಸರ ಮಹಾರಾಣಿ ಬೈರಾದೇವಿ ಕಟ್ಟಿಸಿದಳೆಂದು ಇತಿಹಾಸ ಹೇಳುತ್ತದೆ.

ಪ್ರತಿ ವರ್ಷ ದಸರಾ ಉತ್ಸವದ ಸಮಯದಲ್ಲಿ ಈ ಮುತ್ತಿನ ಕೆರೆಯಲ್ಲಿ ಆದಿನಾಥ ಸ್ವಾಮಿಯ ತೆಪ್ಪೋತ್ಸವ ನಡೆಯುತ್ತದೆ. ಈ ಕೆರೆಯ ಮುಂಭಾಗದಲ್ಲಿ ಆದಿನಾಥ ಸ್ವಾಮಿಯ ಬಸದಿ, ಪದ್ಮಾವತಿ ಅಮ್ಮನ ಬಸದಿ, ಕ್ಷೇತ್ರಪಾಲ ಗುಡಿ ಮತ್ತು ವೆಂಕಟರಮಣ ಸ್ವಾಮಿಯ ದೇವಾಲಯವಿದೆ.

**- ನಾಗರಾಜ ಉಂಚಳ್ಳಿ, ಉಡುಪಿ**





## ಖಾಲಿ ಬಾಟಲಿಯಿಂದ ಕಲೆ

ಮೂಲತಃ ದಕ್ಷಿಣ ಕನ್ನಡ ಜಿಲ್ಲೆಯವರಾದ ಇದೀಗ ಹೈದರಾಬಾದ್‌ನ ಹೋಟೆಲ್ ಉದ್ಯಮಿಯ ಪತ್ನಿಯಾಗಿರುವ ಶಾಂತಿ ಮಂಜ ಅವರು ಮನೆಗೆ ಬಂದಾಗ ಎದುರು ಟೀಪಾಯಿಯ ಮೇಲೆ ಖಾಲಿ ನೀರಿನ 2 ಲೀಟರ್ ಅಳತೆಯ ಪ್ಲಾಸ್ಟಿಕ್ ಬಾಟಲಿ ಇಟ್ಟರೆ ಸಾಕು. ಮಾತನಾಡುತ್ತಲೇ ಬ್ಲೇಡ್‌ನಿಂದ ಸೀಳು ಮಾಡಿ ಮಧ್ಯೆ ಪೇಪರಿನ ಹೂಗಳನ್ನು ಶೃಂಗರಿಸಿ ನಿಮ್ಮ ಕೈಗೆ ಸುಂದರ ಕಲಾಕೃತಿಯೊಂದನ್ನು ಉಡುಗೊರೆ ಕೊಡುತ್ತಾರೆ.

**- ಕೆ.ಶ್ರೀನಿವಾಸರಾವ್, ಹರಪನಹಳ್ಳಿ**

## ಗಂಗರ ಕಾಲದ ನಾಣ್ಯ

ಈ ಚಿತ್ರದಲ್ಲಿ ಕಾಣುವ ನಾಣ್ಯವು ಗಂಗರ ಕಾಲದ್ದಾಗಿದ್ದು ಇದರ ಒಂದು ಮುಖದಲ್ಲಿ ಗಂಗರ ರಾಷ್ಟ್ರಲಾಂಛನವಾದ ಆನೆಯ ಚಿತ್ರವಿದೆ ಹಾಗೂ ಇನ್ನೊಂದು ಮುಖದಲ್ಲಿ ಕೆಲವೊಂದು ಲಿಪಿಗಳಿವೆ. ಈ ನಾಣ್ಯವು ತುರುವೇಕೆರೆಯಲ್ಲಿ 10ನೇ ತರಗತಿಯಲ್ಲಿ ಓದುತ್ತಿರುವ ವೈ.ಭಾರ್ಗವನ ನಾಣ್ಯಸಂಗ್ರಹದಲ್ಲಿದೆ.

**- ಎಸ್.ಯೋಗಾನಂದ, ತುರುವೇಕೆರೆ**



